**ಕರ್ನಾಟಕ ಸರ್ಕಾರ**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಉ ನಿ : ಸುಮಪ : 2018–19** **ದಿನಾಂಕ: 27–02–2019**

# ಪತ್ರಿಕಾ ಆಮಂತ್ರಣ

1. **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**
   **'ಜಲಾಮೃತ' ಕಾರ್ಯಕ್ರಮದಲುದ್ಘಾಟನಾ ಸಮಾರಂಭ:**

   **ಲೋಕಾರ್ಪಣೆ:**

   ಹೆಚ್.ಡಿ. ಕುಮಾರಸ್ವಾಮಿ,
   ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

   ಡಾ ಜಿ. ಪರಮೇಶ್ವರ್,
   ಉಪ ಮುಖ್ಯಮಂತ್ರಿಗಳು.

   ದಿನಾಂಕ: 28–02–2019 ಗುರುವಾರ, ಸಮಯ: ಬೆಳಿಗ್ಗೆ: 10.00 ಗಂಟೆಗೆ
   ಸ್ಥಳ: ಡಾ ಬಿ.ಆರ್. ಅಂಬೇಡ್ಕರ್ ಭವನ, ಮಿಲ್ಲರ್ಸ್ ರಸ್ತೆ, ಬೆಂಗಳೂರು.

2. ಪತ್ರಿಕಾಗೋಷ್ಠಿ:
   ಕಂದಾಯ ಇಲಾಖೆ ಅಧೀನದಲ್ಲಿರುವ ಭೂಮಾಪನ, ಕಂದಾಯ ವ್ಯವಸ್ಥೆ ಹಾಗೂ ಭೂದಾಖಲೆಗಳ ಇಲಾಖೆಯ ಪ್ರಗತಿ ಕುರಿತಂತೆ

   ಆರ್.ವಿ. ದೇಶಪಾಂಡೆ,
   ಕಂದಾಯ ಸಚಿವರು.

   ದಿನಾಂಕ: 28–02–2019 ಗುರುವಾರ, ಸಮಯ: ಬೆಳಿಗ್ಗೆ: 10.30 ಗಂಟೆಗೆ
   ಸ್ಥಳ: ಕೊಠಡಿ ಸಂಖ್ಯೆ 334, ಮೂರನೇ ಮಹಡಿ, ಸಮ್ಮೇಳನ ಸಭಾಂಗಣ, ವಿಧಾನಸೌಧ, ಬೆಂಗಳೂರು.

3. **<u>ಪತ್ರಿಕಾಗೋಷ್ಠಿ:</u>**

ಹೆಚ್1 ಎನ್1 ಸೋಂಕು ತಡೆಗಟ್ಟುವ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ಕುರಿತು

ದಿನಾಂಕ: 28-02-2019 ಗುರುವಾರ, ಸಮಯ: ಮಧ್ಯಾಹ್ನ: 12.30 ಗಂಟೆಗೆ
ಸ್ಥಳ: ಜಿಲ್ಲಾಧಿಕಾರಿಗಳ ಕಚೇರಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

4. ಪ್ರಾಥಮಿಕ ಆರೋಗ್ಯ ಕೇಂದ್ರ ಕೋಣನಕುಂಟೆ ನೂತನ ಕಟ್ಟಡ ಉದ್ಘಾಟನಾ ಸಮಾರಂಭ:
ಘನ ಉಪಸ್ಥಿತಿ:

ಡಾ: ಜಿ. ಪರಮೇಶ್ವರ
ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಉದ್ಘಾಟನೆ:

ಶ್ರೀ ಶಿವಾನಂದ ಎಸ್. ಪಾಟೀಲ್,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ದಿನಾಂಕ: 28-2-2019 ಗುರುವಾರ ಮಧ್ಯಾಹ್ನ 2-30 ಗಂಟೆಗೆ
ಸ್ಥಳ: ಕೋಣನಕುಂಟೆ, ಅಮೃತನಗರ ಮುಖ್ಯ ರಸ್ತೆ, ಬೆಂಗಳೂರು -62

5. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ವಿವಿಧ ಕಾರ್ಯಕ್ರಮಗಳಿಗೆ ಚಾಲನೆ

ಉದ್ಘಾಟನೆ:
ಡಾ ಜಿ. ಪರಮೇಶ್ವರ, ಉಪ ಮುಖ್ಯಮಂತ್ರಿಗಳು

ಘನ ಉಪಸ್ಥಿತಿ:
ಡಿ. ಕೆ. ಸುರೇಶ್, ಲೋಕಸಭಾ ಸದಸ್ಯರು.

ಗೌರವಾನ್ವಿತ ಅತಿಥಿಗಳು:

ಡಿ.ವಿ. ಸದಾನಂದಗೌಡ,
ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವರು.

ಶ್ರೀಮತಿ ನಿರ್ಮಲಾ ಸೀತಾರಾಮನ್
ಕೇಂದ್ರ ರಕ್ಷಣಾ ಸಚಿವರು.

ಕೆ.ಜೆ. ಜಾರ್ಜ್
ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು.

ಕೃಷ್ಣ ಬೈರೇಗೌಡ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.
ಬಿ.ಜಡ್. ಜಮೀರ್ ಅಹ್ಮದ್ ಖಾನ್
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

ಡಾ ಜಯಮಾಲಾ ರಾಮಚಂದ್ರ
ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಿರಿಯ ನಾಗರೀಕರು ಮತ್ತು ವಿಕಲಚೇತನರ ಸಬಲೀಕರಣ ಸಚಿವರು.

ಅಧ್ಯಕ್ಷತೆ:

ಎಂ. ಕೃಷ್ಣಪ್ಪ,
ಶಾಸಕರು,
ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ.

ಮುನಿರತ್ನ,
ಶಾಸಕರು,
ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರ

ದಿನಾಂಕ: 28-02-2019 ಗುರುವಾರ, ಸಮಯ: ಸಂಜೆ : 4-00 ಗಂಟೆಗೆ
ಸ್ಥಳ: ಗೊಟ್ಟಿಗೆರೆ ಗುಡ್ಡ, ಗೊಟ್ಟಿಗೆರೆ, ಬೆಂಗಳೂರು.

6. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿ ವತಿಯಿಂದ 11 ನೇ ಬೆಂಗಳೂರು ಅಂತರಾಷ್ಟ್ರೀಯ ಚಲನಚಿತ್ರೋತ್ಸವ ಸಮಾರೋಪ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ

**ಪ್ರಶಸ್ತಿ ಪ್ರದಾನ:**

ವಜುಭಾಯಿ ರುಡಾಬಾಯಿ ವಾಲಾ,
ಘನತೆವೆತ್ತ ರಾಜ್ಯಪಾಲರು

**ಮುಖ್ಯ ಅತಿಥಿಗಳು:**
ಡಾ. ಜಿ. ಪರಮೇಶ್ವರ್

ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

ಆರ್. ರೋಷನ್ ಬೇಗ್
ಶಾಸಕರು, ಶಿವಾಜಿನಗರ ಕ್ಷೇತ್ರ

ಪಿ.ಸಿ. ಮೋಹನ್
ಲೋಕಸಭಾ ಸದಸ್ಯರು.

ಶ್ರೀಮತಿ ಗಂಗಾಂಬಿಕೆ
ಮಹಾಪೌರರು, ಬೆಂಗಳೂರು ಮಹಾನಗರಪಾಲಿಕೆ

ಎಸ್.ಎ. ಚಿನ್ನೇಗೌಡ,
ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ,

ಟಿ.ಎಂ. ವಿಜಯಭಾಸ್ಕರ್, ಐ.ಎ.ಎಸ್.,
ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ

ಕ್ರಿಸ್ಟಾಫ್ ಝಾನುಸಿ,
ಪೋಲ್ಯಾಂಡ್‌ನ ಖ್ಯಾತ ನಿರ್ದೇಶಕರು

ದಿನಾಂಕ: 28-02-2019 ಗುರುವಾರ, ಸಮಯ: ಸಂಜೆ : 6-00 ಗಂಟೆಗೆ.

ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಂಗಳೂರು.

**ಪತ್ರಿಕಾ ಪ್ರಕಟಣೆ**

# "ಜಲಾಮೃತ" ಎಂಬ ಬೃಹತ್ ಕಾರ್ಯಕ್ರಮಕ್ಕೆ ಚಾಲನೆ

ಬೆಂಗಳೂರು, ಫೆ 27 (ಕರ್ನಾಟಕ ವಾರ್ತೆ)

ಜೀವದ ಉಗಮ ಜಲದಿಂದ. ಆ ಜಲದ ಸಂರಕ್ಷಣೆಗೆ, ಜನತೆಯಲ್ಲಿ ಜಾಗೃತ ಮತ್ತು ಸುಸ್ಥಿರ ಸಂಸ್ಕೃತಿಯನ್ನು ಬೆಳೆಸಲು, ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು 'ಜಲಾಮೃತ" ಎಂಬ ಬೃಹತ್ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. "ಜಲಾಮೃತ" ಎಲ್ಲರನ್ನೊಳಗೊಂಡ, ಸಮುದಾಯವೇ ಮುನ್ನಡೆಸುವ ಆಂದೋಲನವಾಗಿ ರೂಪುಗೊಳ್ಳಲಿದೆ.

ಜನರಲ್ಲಿ ಜಲ ಸಾಕ್ಷರತೆ ಹರಡಿ, ಪ್ರತಿ ಹನಿ ನೀರನ್ನೂ ಸಹ ಉಳಿಸಲು ಅವರು ಆಂದೋಲನವನ್ನು ಸೇರಲು ಪ್ರೇರೇಪಿಸುವುದು, ಜಲ ಮೂಲಗಳ ಪುನಶ್ಚೇತನ ಮತ್ತು ಸೃಜನೆ

ಮುಖಾಂತರ ಜಲ ಸಂರಕ್ಷಣೆ, ಜಲದ ಜಾಗೃತ ಮತ್ತು ದಕ್ಷ ಉಪಯೋಗವನ್ನು ಪ್ರವರ್ತಿಸುವುದು. ಜಲ ಮೂಲಗಳ ಸುಸ್ಥಿರತೆಗೆ, ಅರಣ್ಯೀಕರಣವನ್ನು ಒಂದು ಸಾಮೂಹಿಕ ಆಂದೋಲನವಾಗಿ ಮಾಡುವುದು.

ಇದೇ ಸಂದರ್ಭದಲ್ಲಿ 2019 ನ್ನು ಕರ್ನಾಟಕದ "ಜಲವರ್ಷ" ಎಂದು ಘೋಷಿಸಲಾಗುವುದು. "ಜಲಾಮೃತ" ವನ್ನು ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಹಾಗೂ ಉಪಮುಖ್ಯಮಂತ್ರಿ ಡಾ ಜಿ. ಪರಮೇಶ್ವರ್ ಅವರು ಫೆಬ್ರವರಿ 28 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಡಾ ಬಿ.ಆರ್. ಅಂಬೇಡ್ಕರ್ ಭವನ, ಮಿಲ್ಲರ್ಸ್ ರಸ್ತೆ, ಬೆಂಗಳೂರಿನಲ್ಲಿ ಜನತೆಗೆ ಲೋಕಾರ್ಪಣೆ ಮಾಡುವರು.

## ಅರ್ಜಿ ಆಹ್ವಾನ

ಬೆಂಗಳೂರು, ಫೆ 27 (ಕರ್ನಾಟಕ ವಾರ್ತೆ)

ಆಕಾಶವಾಣಿಯ ಬೆಂಗಳೂರು ಕೇಂದ್ರದ ಸುದ್ದಿ ವಿಭಾಗಕ್ಕೆ ಹಾವೇರಿ, ಶಿವಮೊಗ್ಗ, ಹಾಸನ, ಚಿತ್ರದುರ್ಗ, ಉತ್ತರ ಕನ್ನಡ, ಬಾಗಲಕೋಟೆ, ಚಿಕ್ಕಮಗಳೂರು, ತುಮಕೂರು, ಉಡುಪಿ, ಯಾದಗಿರಿ, ಕಲಬುರಗಿ ಮತ್ತು ಹುಬ್ಬಳ್ಳಿ – ಧಾರವಾಡ ಜಿಲ್ಲೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುವ ಅರೆಕಾಲಿಕ ವರದಿಗಾರರು ಬೇಕಾಗಿದ್ದಾರೆ.

ಪಿ.ಜಿ ಡಿಪ್ಲೊಮಾ/ಪತ್ರಿಕೋದ್ಯಮದಲ್ಲಿ ಪದವಿ/ಸಮೂಹ ಮಾಧ್ಯಮ ಅಥವಾ ಪತ್ರಕರ್ತರರಾಗಿ ಕನಿಷ್ಠ ಎರಡು ವರ್ಷಗಳ ಅನುಭವನ ಅಗತ್ಯ.ವಯೋಮಿತಿ 24 ರಿಂದ 45 ವರ್ಷಗಳು. ಸರ್ಕಾರಿ ಉದ್ಯೋಗಗಳು, ಸಾರ್ವಜನಿಕ ಸಂಸ್ಥೆಗಳ ಸಿಬ್ಬಂದಿ, ರಾಜಕೀಯ ಪಕ್ಷಗಳ ಸದಸ್ಯರು ಈ ಹುದ್ದೆಗೆ ಅರ್ಹರಾಗುವುದಿಲ್ಲ.

ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕವನ್ನು ಮಾರ್ಚ್ 11 ರವರೆಗೆ ವಿಸ್ತರಿಸಲಾಗಿದೆ.

ಆಸಕ್ತರು ಸ್ವವಿರಗಳನ್ನು ಒಳಗೊಂಡ ಅರ್ಜಿಯನ್ನು ಉಪ ಮಹಾನಿರ್ದೇಶಕರು (ಇ), ಅಕಾಶವಾಣಿ, ರಾಜಭವನ ರಸ್ತೆ, ಬೆಂಗಳೂರು – 560 001 ವಿಳಾಸಕ್ಕೆ ಕಳುಹಿಸಬಹುದಾಗಿದೆ.

ಹೆಚ್ಚಿನ ವಿವರಗಳಿಗೆ ಆಕಾಶವಾಣಿಯ ವೆಬ್‌ಸೈಟ್ www.airbengaluru.com ನಲ್ಲಿ ನೋಡಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ರಾಷ್ಟ್ರೀಯ ಯುವ ಸ್ವಯಂಸೇವಕರ" ನೇಮಕಾತಿಗಾಗಿ ಯುವಕ/ಯುವತಿಯರಿಂದ ಅರ್ಜಿ ಆಹ್ವಾನ"

**ಬೆಂಗಳೂರು, ಫೆ 27 (ಕರ್ನಾಟಕ ವಾರ್ತೆ):**

ಭಾರತ ಸರ್ಕಾರದ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯವು ಯುವಕ/ಯುವತಿಯರಿಗಾಗಿ "ರಾಷ್ಟ್ರೀಯ ಯುವ ಸ್ವಯಂ ಸೇವಕರು" ಎಂಬ ಹೊಸ ಯೋಜನೆಯನ್ನು ಪ್ರಾರಂಭಿಸಿದೆ. ಪ್ರಸ್ತುತ ಸಾಲಿನಲ್ಲಿಯೂ ಈ ಯೋಜನೆ ಮುಂದುವರಿಯಲಿದೆ. ಯೋಜನೆಯ ಉದ್ದೇಶ ಯುವಜನರನ್ನು ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳುವುದು. ಇದರ ಅನ್ವಯ ದೇಶದಾದ್ಯಂತ ಇಪ್ಪತ್ತು ಸಾವಿರ(20000) ಯುವಜನರನ್ನು "ರಾಷ್ಟ್ರೀಯ ಯುವ ಸ್ವಯಂ ಸೇವಕರನ್ನಾಗಿ ಪೂರ್ಣಪ್ರಮಾಣದಲ್ಲಿ ಎರಡು ವರ್ಷಗಳ ಅವಧಿಗೆ ನಿಯೋಜಿಸಿಕೊಳ್ಳಲಾಗುತ್ತಿದೆ. ಆಯ್ಕೆಯಾದವರಿಗೆ ಸೂಕ್ತ ಗೌರವ ಧನ ಜೊತೆಗೆ ವಿಶೇಷ ತರಭೇತಿ ನೀಡಲಾಗುವುದು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯಯಲ್ಲಿ ಬರುವ 04 ತಾಲ್ಲೂಕುಗಳಿಂದ 08ಜನ ಹಾಗೂ ಕಛೇರಿಯ ಕಂಪ್ಯೂಟರ್‌ನಲ್ಲಿ ಕಾರ್ಯನಿರ್ವಹಿಸಲು 02 ಜನ ಸೇರಿದಂತೆ ,ರಾಮನಗರ ಜಿಲ್ಲೆಯ ವ್ಯಾಪ್ತಿಯಯಲ್ಲಿ ಬರುವ 04 ತಾಲ್ಲೂಕುಗಳಿಂದ 03ಜನ ಒಟ್ಟು**13** ಜನ ಯುವಕ/ಯುವತಿಯರನ್ನು " ರಾಷ್ಟ್ರೀಯ ಯುವ ಸ್ವಯಂ ಸೇವಕರನ್ನಾಗಿ ನೇಮಿಸಿಕೊಳ್ಳಲು ಅರ್ಜಿಗಳನ್ನು ಅಹ್ವಾನಿಸಲಾಗುತ್ತಿದೆ. ಈ ಕೆಳಕಂಡ ಅರ್ಹತೆಗಳನ್ನು ಹೊಂದಿರುವವರು ಕೆಳಕಂಡ ನಿಬಂಧನೆಗೆ ಒಳಪಟ್ಟು ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸಲು ಇಚ್ಚಿಸುವ ಯುವಕ/ಯುವತಿಯರು ನಿಗಧಿತ ಅರ್ಜಿ ನಮೂನೆಯನ್ನು ಜಿಲ್ಲಾ ಯುವಜನ ಸಮನ್ವಯಾಧಿಕಾರಿ, ನೆಹರು ಯುವ ಕೇಂದ್ರ,ಬೆಂಗಳೂರು ಗ್ರಾಮಾಂತರ ಜಿಲ್ಲೆ, ಓ.ಂ.ಃ-2, G.E,F.Block, 2nd Floor, Industrial Town, west of chord Road, Bengaluru– 570044 ಇವರಿಂದ ಕಾರ್ಯಾಲಯದ ಕೆಲಸದ ವೇಳೆಯಲ್ಲಿ ಪಡೆದು ಅಥವಾ N.Y.K Web site www.nyks.nic.in Down load ಮಾಡಿಕೊಂಡು ದಿನಾಂಕ:21.02.2019 ಗುರುವಾರ ದಂದು ಸಂಜೆ 5–00 ಘಂಟೆಯ ಒಳಗಾಗಿ ಅರ್ಜಿ ಸಲ್ಲಿಸಲು ವಿನಂತಿಸಲಾಗಿದೆ. ಹೆಚ್ಚಿನ ವಿವರಗಳಿಗೆ 080–23504271 ದೂರವಾಣಿಯನ್ನು ಸಂಪರ್ಕಿಸಬಹುದು.

## "ರಾಷ್ಟ್ರೀಯ ಯುವ ಸ್ವಯಂಸೇವಕರ"ನೇಮಕಾತಿಗಾಗಿ ಯುವಕ/ಯುವತಿಯರಿಂದ ಅರ್ಜಿ ಆಹ್ವಾನ"

ಭಾರತ ಸರ್ಕಾರದ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯವು ಯುವಕ/ಯುವತಿಯರಿಗಾಗಿ "ರಾಷ್ಟ್ರೀಯ ಯುವ ಸ್ವಯಂ ಸೇವಕರು" ಎಂಬ ಹೊಸ ಯೋಜನೆಯನ್ನು ಪ್ರಾರಂಭಿಸಿದೆ.

ಪ್ರಸ್ತುತ ಸಾಲಿನಲ್ಲಿಯೂ ಈ ಯೋಜನೆ ಮುಂದುವರಿಯಲಿದೆ. ಯೋಜನೆಯ ಉದ್ದೇಶ ಯುವಜನರನ್ನು ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳುವುದು. ಇದರ ಅನ್ವಯ ದೇಶದಾದ್ಯಂತ ಇಪ್ಪತ್ತು ಸಾವಿರ(20000) ಯುವಜನರನ್ನು "ರಾಷ್ಟ್ರೀಯ ಯುವ ಸ್ವಯಂ ಸೇವಕರನ್ನಾಗಿ ಪೂರ್ಣಪ್ರಮಾಣದಲ್ಲಿ ಎರಡು ವರ್ಷಗಳ ಅವಧಿಗೆ ನಿಯೋಜಿಸಿಕೊಳ್ಳಲಾಗುತ್ತಿದೆ. ಆಯ್ಕೆಯಾದವರಿಗೆ ಸೂಕ್ತ ಗೌರವ ಧನ ಜೊತೆಗೆ ವಿಶೇಷ ತರಭೇತಿ ನೀಡಲಾಗುವುದು

ಹಾಗಾಗಿ ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಯಲ್ಲಿ ಬರುವ 04 ತಾಲ್ಲೂಕುಗಳಿಂದ 08ಜನ ಹಾಗೂ ಕಛೇರಿಯ ಕಂಪ್ಯೂಟರ್‌ನಲ್ಲಿ ಕಾರ್ಯನಿರ್ವಹಿಸಲು 02 ಜನ ಸೇರಿದಂತೆ 14 ಜನ ಯುವಕ/ಯುವತಿಯರನ್ನು " ರಾಷ್ಟ್ರೀಯ ಯುವ ಸ್ವಯಂ ಸೇವಕರನ್ನಾಗಿ ನೇಮಿಸಿಕೊಳ್ಳಲು ಅರ್ಜಿಗಳನ್ನು ಅಹ್ವಾನಿಸಲಾಗುತ್ತಿದೆ. ಈ ಕೆಳಕಂಡ ಅರ್ಹತೆಗಳನ್ನು ಹೊಂದಿರುವವರು ಕೆಳಕಂಡ ನಿಬಂಧನೆಗೆ ಒಳಪಟ್ಟು ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸಲು ಇಚ್ಚಿಸುವ ಯುವಕ/ಯುವತಿಯರು ನಿಗಧಿತ ಅರ್ಜಿ ನಮೂನೆಯನ್ನು ಜಿಲ್ಲಾ ಯುವಜನ ಸಮನ್ವಯಾಧಿಕಾರಿ, ನೆಹರು ಯುವ ಕೇಂದ್ರ,ಬೆಂಗಳೂರು ನಗರ ಜಿಲ್ಲೆ, **No.B-2, G.E,F.Block, 2nd Floor, Industrial Town, west of chord Road, Bengaluru-** 570044 ಇವರಿಂದ ಕಾರ್ಯಾಲಯದ ಕೆಲಸದ ವೇಳೆಯಲ್ಲಿ ಪದೆದು ಅಥವಾ **N.Y.K Web site** [www.nyks.nic.in](http://www.nyks.nic.in) **Down load** ಮಾಡಿಕೊಂಡು ದಿನಾಂಕ:02.03.2019 ಶನಿವಾರ ದಂದು ಸಂಜೆ 5-00 ಘಂಟೆಯ ಒಳಗಾಗಿ ಅರ್ಜಿ ಸಲ್ಲಿಸಲು ವಿನಂತಿಸಲಾಗಿದೆ. ಹೆಚ್ಚಿನ ವಿವರಗಳಿಗೆ 080-23504271 ದೂರವಾಣಿಯನ್ನು ಸಂಪರ್ಕಿಸಬಹುದು.

**ಸರ್ ಸಿ. ವಿ. ರಾಮನ್ ರಾಜ್ಯ ಮಟ್ಟದ ವಿಜ್ಞಾನ ರಸಪ್ರಶ್ನೆ ಸ್ಪರ್ಧೆ**

**ಫೆಬ್ರವರಿ 28 ರಿಂದ ಚಂದನ ವಾಹಿನಿಯಲ್ಲಿ ಪ್ರಸಾರ**

**ಬೆಂಗಳೂರು, ಫೆ 27 (ಕರ್ನಾಟಕ ವಾರ್ತೆ):**

ವಿದ್ಯಾರ್ಥಿಗಳಲ್ಲಿ ವಿಜ್ಞಾನದಲ್ಲಿ ಆಸಕ್ತಿ ಮೂಡಿಸಿ ಭಾವಿ ವಿಜ್ಞಾನಿಗಳನ್ನು ರೂಪಿಸುವ ಆಶಯದಿಂದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೋಸೈಟಿ ಇವರುಗಳ ಸಹಯೋಗದೊಂದಿಗೆ

ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ದೂರದರ್ಶನ ಚಂದನ ವಾಹಿನಿಯಲ್ಲಿ ಸರ್ ಸಿ. ವಿ. ರಾಮನ್ ರಾಜ್ಯ ಮಟ್ಟದ ವಿಜ್ಞಾನ ರಸಪ್ರಶ್ನೆ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ಸರ್ ಸಿ. ವಿ. ರಾಮನ್ ರಾಜ್ಯ ಮಟ್ಟದ ವಿಜ್ಞಾನ ರಸಪ್ರಶ್ನೆ ಸ್ಪರ್ಧೆಯನ್ನು ಚಂದನ ವಾಹಿನಿಯ 'ಥಟ್ ಅಂತಾ ಹೇಳಿ' ಕಾರ್ಯಕ್ರಮ ಅಡಿಯಲ್ಲಿ ಚಿತ್ರೀಕರಿಸಲಾಗಿದ್ದು, ಅದು ಇದೇ ಬರುವ ಫೆಬ್ರವರಿ 28 ರಿಂದ ಸೋಮವಾರದಿಂದ ಶುಕ್ರವಾರದವರೆಗೆ ರಾತ್ರಿ 09.30–10.00ರವರೆಗೆ ಚಂದನ ವಾಹಿನಿಯಲ್ಲಿ ಪ್ರಸಾರವಾಗಲಿದೆ. ಇದಲ್ಲದೇ ಮರುದಿನ ಮಧ್ಯಾಹ್ನ 12.30–01.00ರ ಅವಧಿಯಲ್ಲಿ ಮರುಪ್ರಸಾರಗೊಳ್ಳಲಿದೆ. ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಗೌರವ ಕಾರ್ಯದರ್ಶಿ ಗಿರೀಶ ಕಡ್ಲೇವಾಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.